ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು- 560001

ದಿನಾಂಕ :01.01.2013

ಸಂಖ್ಯೆ : ಸಿ7[2]/ಪ್ರಾ.ಶಿ.ಅ.ಹೊ.ಶಾ.ಅನು.01/2011-12

## : ಸುತ್ತೋಲೆ :

ವಿಷಯ: ಕಡ್ಡಾಯ ಪ್ರಾಥಮಿಕ ಶಿಕ್ಷಣ-2009 ರಂತೆ 8ನೇ ತರಗತಿಯನ್ನು ಪ್ರಾಥಮಿಕ ತರಗತಿಗೆ ಸೇರ್ಪಡೆಗೊಳಿಸಿ ಬದಲಾವಣೆ ಮಾಡಿರುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರದ ಸಂಖ್ಯೆ:ಇಡಿ.91.ಮಾಹಿತಿ.2012 ದಿ:15.11.2012
2. ಈ ಕಛೇರಿ ಸಮಪತ್ರ ಸಂಖ್ಯೆ ಸುತ್ತೋಲೆ ದಿನಾಂಕ:03.10.2012.

*********

ವಿಷಯಕ್ಕೆ ಸಂಬಂಧಿಸಿದಂತೆ 2013-14ನೇ ಸಾಲಿಗೆ 6,7 ಮತ್ತು 8ನೇ ತರಗತಿಯನ್ನು ಆಂಗ್ಲ ಮಾಧ್ಯಮದಲ್ಲಿ ಪ್ರಾರಂಭಿಸಲು ಆಡಳಿತ ಮಂಡಳಿಗಳಿಂದ ಪ್ರಸ್ತಾವನೆಯನ್ನು ಸ್ವೀಕರಿಸಿ ಈ ಕಛೇರಿಗೆ ದಿನಾಂಕ:31-12-20.. ರ ಒಳಗೆ ಸಲ್ಲಿಸುವಂತೆ ಉಲ್ಲೇಖ [2]ರ ಪತ್ರದಲ್ಲಿ ಕಛೇರಿಯಿಂದ ಸುತ್ತೋಲೆ ನೀಡಲಾಗಿತ್ತು.

ಉಲ್ಲೇಖ [1]ರ ಸರ್ಕಾರದ ಆದೇಶದಂತೆ ಕರ್ನಾಟಕ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮಗಳು-2012 – 2.ಎಫ್ ಉಪ ನಿಯಮದಂತೆ ಪ್ರಾಥಮಿಕ ಶಿಕ್ಷಣ ಚಕ್ರವು 1 ರಿಂದ 8ನೇ ತರಗತಿಯವರೆಗೆ ಶಾಲಾ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆಗಳ ನಿಯಮಗಳನ್ನು ಪಾಲನೆ ಮಾಡಬೇಕೆಂದು ತಿಳಿಸಿರುವುದರಿಂದ 2013-14ನೇ ಸಾಲಿನಿಂದ ಪ್ರಾಥಮಿಕ ಶಿಕ್ಷಣ ಹಂತವನ್ನು 1 ರಿಂದ 8ನೇ ತರಗತಿಗೆ ನಿಗಧಿಪಡಿಸಿದೆ. ಈಗಾಗಲೇ 6 ಮತ್ತು 7 ನೇ ತರಗತಿಯವರೆಗೆ ಅನುಮತಿ ಪಡೆದು ನಡೆಸುತ್ತಿರುವ ಶಾಲೆಗಳಲ್ಲಿ 8ನೇ ತರಗತಿಯನ್ನು ಸ್ವಾಭಾವಿಕ ಬೆಳವಣಿಗೆ ಮೇಲೆ ಪ್ರಾರಂಭಿಸುವ ಬಗ್ಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ತಿಳಿಸಿದೆ.

1. ಈಗ ಬದಲಾವಣೆಯಾದ ಪದ್ಧತಿಯಂತೆ 1 ರಿಂದ 8ನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣ ಚಕ್ರವು ಬದಲಾವಣೆಯಾಗಿದ್ದು ಇದರಂತೆ 2013-14ನೇ ಸಾಲಿನಿಂದ ಪ್ರಾಥಮಿಕ ಹಂತವನ್ನು 1 ರಿಂದ 8ನೇ ತರಗತಿಯವರೆಗೆ ನಿಗಧಿಪಡಿಸಿದೆ.

2. 2013-14ನೇ ಸಾಲಿನಲ್ಲಿ 6,7ನೇ ತರಗತಿಗೆ ಅನುಮತಿಗೆ ಬರುವ ಪ್ರಸ್ತಾವನೆಗಳಲ್ಲಿ ಉಪಸಿದ .... ಆಂಗ್ಲ ಮಾಧ್ಯಮ ಹೊರತುಪಡಿಸಿ ಉಳಿದ ಮಾಧ್ಯಮದ ತರಗತಿಗಳಿಗೆ 8ನೇ ತರಗತಿಯನ್ನು ....ಗೊಂಡ 6,7 ಮತ್ತು 8ನೇ ತರಗತಿಗೆ ಆದೇಶವನ್ನು ನೀಡುವುದು. ಆಂಗ್ಲ ಮಾಧ್ಯಮಕ್ಕೆ ಸಂಬಂಧಿಸಿದಂತೆ ಈ ಕಛೇರಿಯಿಂದ ಆದೇಶ ನೀಡಲಾಗುವುದು.

3. 2012-13ನೇ ಸಾಲಿನವರೆಗೆ ಈಗಾಗಲೇ 6 ಮತ್ತು 7ನೇ ತರಗತಿಗಳಿಗೆ ಅನುಮತಿ ಪಡೆದಂತಹ ಶಾಲೆಗಳಿಗೆ 8ನೇ ತರಗತಿಯನ್ನು ಸ್ವಾಭಾವಿಕ ಬೆಳವಣಿಗೆ ಮೇಲೆ ಪ್ರಾರಂಭಿಸಿಕೊಳ್ಳಲು ಅನುಮತಿ ನೀಡಿದೆ. ಇಂತಹ ಪ್ರಕರಣಗಳಿಗೆ ಮತ್ತೊಮ್ಮೆ ಪ್ರತ್ಯೇಕ ಅನುಮತಿಯನ್ನು ನೀಡುವ ಆವಶ್ಯಕತೆ ಇರುವುದಿಲ್ಲ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ರಾಜಾಜಿನಗರ ಉತ್ತರ ವಲಯ-1 ಬೆಂಗಳೂರು -10.

ದಿನಾಂಕ 20.3.2013

ಸಂಖ್ಯೆ : ಸಿ2.ಪ್ರಾ.ಶಾ.ಉ.ಕ.ಶಿ.ಅಧಿ.ವಿ.09/ನೊಂ.17/2012-13

ಸುತ್ತೋಲೆ

ಮಾನ್ಯ ಆಯುಕ್ತರು ಸಾ.ಶಿ.ಇ.ಬೆಂ. ರವರ ಸುತ್ತೋಲೆ ಸಂಖ್ಯೆ ಸಿ7.(2)ಪ್ರಾ.ಶಿ.ಶಾ.ಅ.ಹೊ.ಶಾ.ಅನು.1/11-12 ದಿ.1.1.2013 ರ ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು

ರವರಿಗೆ

1. ಈ ವಲಯದ ಎಲ್ಲಾ ಪ್ರಾಥಮಿಕ / ಪ್ರೌಢ ಸರ್ಕಾರಿ /ಖಾಸಗಿ ಅನುದಾನಿತ /ಅನುದಾನ ರಹಿತ ... ಮುಖ್ಯ ಶಿಕ್ಷಕರುಗಳಿಗೆ ಕ್ರಮಕ್ಕಾಗಿ ರವಾನಿಸಿದೆ.
2. ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಉತ್ತರ ಜಿಲ್ಲೆ ...

For Indiramma A.M. Dr. B.K. Ramlal
Educational Endowment Trust (R.) ...

Managing Trustee

Head Mistress
I. R. PUBLIC SCHOOL
Peenya III Phase
Bangalore - 560 058